

# ಮೋಸ್ ಫ್ರೇಂ

## ಜಡ ಗೋಡೆಗೆ ಜೀವಕಳೆ

ತೇವವಿರುವೆಡೆ ಬೆಳೆಯುವ ವಿವಿಧ ಜಾತಿಯ ಪಾಚಿಸಸ್ಯಗಳನ್ನೇ ಒಣಗಿಸಿ, ಸಂರಕ್ಷಿಸಿ ಅದಕ್ಕೆ ಚೌಕಟ್ಟು ರೂಪಿಸುವ 'ಮೋಸ್ ಫ್ರೇಮ್' ಪರಿಕಲ್ಪನೆ ನಗರದಲ್ಲಿನ ಸಿಮೆಂಟ್ ಗೋಡೆಗಳಿಗೆ ಕಳೆ ತುಂಬಬಲ್ಲದು.

■ **ಸೀಮಾ ಹೆಗಡೆ**

ಮಣ್ಣು, ನೀರು, ಗಾಳಿ, ಬೆಳಕು, ಗಿಡ–ಮರದಂತಹ ನೈಸರ್ಗಿಕ ಅಂಶಗಳಿಂದ ಯಾವಾಗಲೂ ಸುತ್ತುವರೆದಿರಬೇಕೆಂಬುದು ಪರಿಸರ ಸಾಂಗತ್ಯ ಬಯಸುವವರ ಹಂಬಲ. ಹಳ್ಳಿ ಜೀವನದಲ್ಲಿ ಇವೆಲ್ಲವೂ ಸಹಜಲಭ್ಯ. ಪಟ್ಟಣಗಳಲ್ಲಿ ಕೃತಕವಾದರೂ ಸರಿ, ಒಂದಿಲ್ಲೊಂದು ರೀತಿ ನಿಸರ್ಗದ ಅಂಶಗಳನ್ನು ಮನೆಯೊಳಗೆ ಅಳವಡಿಸಿಕೊಳ್ಳುವುದನ್ನು ಕಲಿತಿದ್ದೇವೆ. ಆದರೆ ಆದಷ್ಟು ಪ್ರಾಕೃತಿಕವಾದುದೇ ಬೇಕೆಂಬ ಆಸೆ ಬಹುಶಃ ಸಸ್ಯಗಳನ್ನು ಮನೆಯ ಒಳಾಂಗಣದಲ್ಲಿ ಬಳಸುವ ರೂಢಿಯನ್ನು ಮುಂಚೂಣಿಗೆ ತಂದಿರಬೇಕು.

ಎಷ್ಟೇ ಇಷ್ಟವಾದರೂ ಒಳಾಂಗಣದಲ್ಲಿ ಸಸ್ಯಗಳನ್ನು ಸಲಹುವುದು ಎಲ್ಲಾ ಸಂದರ್ಭದಲ್ಲೂ ಕಷ್ಟ. ಹೂಕುಂಡಗಳನ್ನಿಡಲು ಜಾಗ, ನೀರು–ಬೆಳಕಿನ ಕನಿಷ್ಠ ನಿರ್ವಹಣೆ ಅಗತ್ಯವಿರುವ ಸಲುವಾಗಿ ಹೆಚ್ಚಿನ ಬಾರಿ ಸಸ್ಯ ಪಾಲನೆಗೆ ಹಿಂದೇಟು ಹಾಕುತ್ತೇವೆ ಮತ್ತು ಅದಕ್ಕೆ ಪರ್ಯಾಯಗಳನ್ನು ಹುಡುಕುತ್ತಿರುತ್ತೇವೆ. ಈ ಹಿನ್ನೆಲೆಯಲ್ಲಿ, ಮನೆಯ ಗೋಡೆಗಳಿಗೆ ಹೊಸ ಆಯಾಮ ನೀಡಿ, ಶೂನ್ಯ ಕಾಳಜಿಯಲ್ಲಿ ಹಸುರು ಹೊಂದುವ ಆಲೋಚನೆಯನ್ನು ಪ್ರೋತ್ಸಾಹಿಸುವುದು ಹಾವಸೆಗಳ 'ಮೋಸ್ ಫ್ರೇಮ್'.

### ಹಾವಸೆಗಳ ಹಾಸು

ತೇವವಾದ ಕಾಂಪೌಂಡ್ ಗೋಡೆ ಮೇಲೆ ಬೆಳೆಯುವ, ಮಳೆಕಾಡುಗಳಲ್ಲಿ ಮರದ ಮೇಲೆ ಹಬ್ಬುವ ವಿವಿಧ ಜಾತಿಯ ಹಾವಸೆಗಳನ್ನು

